ಸಿಟಿಲೈಟ್ಸ್

# ಡಾ. ರಾಜ್ ಮೇಣದ ಪ್ರತಿಮೆ



ಮಲ್ಲೇಶ್ವರದಲ್ಲಿರುವ ಮಂತ್ರಿ ಮಾಲ್‌ನಲ್ಲಿ ಭಾನುವಾರ ಡಾ.ರಾಜ್‌ಕುಮಾರ್ ಅವರ 15 ಅಡಿ ಎತ್ತರದ ಮೇಣದ ಪ್ರತಿಮೆ ಅನಾವರಣ ಮಾಡಲಾಯಿತು.

---

ಬೆಂಗಳೂರು : ಮಲ್ಲೇಶ್ವರದಲ್ಲಿರುವ ಮಂತ್ರಿ ಮಾಲ್‌ನಲ್ಲಿ ವರನಟ ಡಾ.ರಾಜ್‌ಕುಮಾರ್ ಅವರ 15 ಅಡಿ ಎತ್ತರದ ಮೇಣದ ಪ್ರತಿಮೆಯನ್ನು ಅನಾವರಣಗೊಳಿಸಿ ಸಾರ್ವಜನಿಕರ ವೀಕ್ಷಣೆಗೆ ಇರಿಸಲಾಗಿತ್ತು. ನಟ ಪುನೀತ್ ರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ವಿನಯ್ ರಾಜ್‌ಕುಮಾರ್ ಹಾಗೂ ಎಸ್.ನಾರಾಯಣ ಅವರು ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ನಟ ಪುನೀತ್ ರಾಜ್‌ಕುಮಾರ್, ''ಕನ್ನಡ ನಾಡು, ನುಡಿ, ಸಂಸ್ಕೃತಿಗೆ ನಟಸಾರ್ವಭೌಮ ಡಾ. ರಾಜ್ ಅವರ ಸೇವೆ ಅನನ್ಯವಾದದ್ದು. ತಮ್ಮ ನಟನೆ ಹಾಗೂ ಹೃದಯ ವೈಶಾಲ್ಯತೆ ಮೂಲಕ ಕರ್ನಾಟಕ ಸೇರಿದಂತೆ ದೇಶಾದ್ಯಂತ ಅಭಿಮಾನಿಗಳ ಹೃದಯ ಗೆದ್ದವರು. ಅಂತಹ ಮಹಾನ್ ಕಲಾವಿದರ ಮೇಣದ ಪ್ರತಿಮೆ ಅನಾವರಣಗೊಳಿಸುತ್ತಿರುವುದಕ್ಕೆ ಹೆಮ್ಮೆ ಅನಿಸುತ್ತಿದೆ,'' ಎಂದರು. ಮೇಣದ ಪ್ರತಿಮೆ ಅನಾವರಣಗೊಳಿಸಿ ಡಾ.ರಾಜ್ ಅವರಿಗೆ ಗೌರವ ಸಲ್ಲಿಸಿದ ಖಾಸಗಿ ರೇಡಿಯೋ ವಾಹಿನಿಗೂ ಪುನೀತ್ ಧನ್ಯವಾದ ಹೇಳಿದರು. ಭಾನುವಾರ ಗ್ರಾಹಕರಿಂದ ತುಂಬಿ ತುಳುಕುತ್ತಿದ್ದ ಮಾಲ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಡಾ.ರಾಜ್ ಮೇಣದ ಪ್ರತಿಮೆಯ ಮುಂದೆ ಫೋಟೋ, ಸೆಲ್ಫಿ ಕ್ಲಿಕ್ಕಿಸಿಕೊಂಡು ಖುಷಿ ಪಟ್ಟರು. ಇದೇ ವೇಳೆ ಡಾ.ರಾಜ್‌ಕುಮಾರ್ ಅವರ ಹಾಡುಗಳು ಸಂಗೀತ ಪ್ರೇಮಿಗಳ ಮನತುಂಬಿದವು. ಭಾನುವಾರ ಒಂದು ದಿನ ಮಾತ್ರ ರಾಜ್ ಮೇಣದ ಪ್ರತಿಮೆಯನ್ನು ಮಾಲ್‌ನಲ್ಲಿ ಇರಿಸಲಾಗಿತ್ತು.